**ಸಾಕ್ಷಿಗೆ ದಿನಾಂಕಃ 16.6.2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

## ಪಾಟೀ ಸವಾಲು ಆರೋಪಿ ಪರ ವಕೀಲರಿಂದಃಃ

ನಿಡಿ-2 ರಲ್ಲಿ ನಾನು ಇದ್ದೇನೆ. ನಿಡಿ-2 ಭಾವಚಿತ್ರ ನಮ್ಮ ಕುಟುಂಬದ ಭಾವಚಿತ್ರವಾಗಿರುತ್ತದೆ ಎಂದರೆ ಸರಿಯಲ್ಲ. ನಿಡಿ-2 ಭಾವಚಿತ್ರವನ್ನು ಯಾವ ಜಾಗದಲ್ಲಿ ತೆಗೆದುಕೊಂಡರು ಎಂದು ನನಗೆ ಗೊತ್ತಿಲ್ಲ. ನಾನು ಶಿವಮೊಗ್ಗದಲ್ಲಿ ಅಸ್ವಸ್ತರನ್ನು ಅವರ ಬೇಡಿಕೆಯ ಮೇರೆಗೆ ಅವರನ್ನು ಶೃಶೂಷೆ ಮಾಡುತ್ತೇನೆ. ನಾನು ತಿಂಗಳ ಕೊನೆಯಲ್ಲಿ 2 ದಿನ ರಜೆಯ ಮೇರೆಗೆ ಊರಿಗೆ ಬರುತ್ತೇನೆ. ಉಳಿದ ಸಂದರ್ಭದಲ್ಲಿ ನಾನು ಶಿವಮೊಗ್ಗದಲ್ಲಿ ಕೆಲಸ ಮಾಡುತ್ತೇನೆ. ನಾನು ಘಟನೆ ದಿನದಂದು ದೇವಸ್ಥಾನಕ್ಕೆ ಹೋದಾಗ ಅಲ್ಲಿ ಗಲಾಟೆ ಶಬ್ದ ಕೇಳಿ ಹೋಗಿರುತ್ತೇನೆ. ನಾನು ಘಟನಾ ಸ್ಥಳಕ್ಕೆ ಹೋದಾಗ ಅಲ್ಲಿ ಚಾಸಾ-1 ರಿಂದ 3 ಮತ್ತು ಚಾಸಾ-5 ರವರು ಇದ್ದರು. ಇವರನ್ನು ಹೊರತುಪಡಿಸಿ ಸ್ಥಳೀಯರು ಸಹ ಇದ್ದರು. ಚಾಸಾ-5 ರವರು ಚಾಸಾ-1 ರವರ ಮಾವ ಎಂದರೆ ನನಗೆ ಗೊತ್ತಿಲ್ಲ. ನನ್ನ ಗಂಡನ ಹೆಸರು ಮಾಲತೇಶ್. ನನ್ನ ಗಂಡನ ತಂದೆಯ ಹೆಸರು ರಾಜು ಮತ್ತು ತಾಯಿಯ ಹೆಸರು ಲಕ್ಷ್ಮೀ. ನನ್ನ ಗಂಡನಿಗೆ ಸತೀಶ್ ಎಂಬ ತಮ್ಮ ಮತ್ತು ನಾಗರತ್ನ ಎಂಬ ಸಹೋದರಿ ಇರುವುದಿಲ್ಲ. ನನ್ನ ಗಂಡ ಅವರ ತಂದೆ-ತಾಯಿಗೆ ಒಬ್ಬರೇ ಮಗ. ನನ್ನ ಗಂಡನ ಮನೆಯವರ ವಂಶವೃಕ್ಷವನ್ನು ಮಾಡಿಸಿರುವುದಿಲ್ಲ. ನಾನು ನನ್ನ ಗಂಡನ ಮನೆಯವರ ವಂಶವೃಕ್ಷವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಆಗುವುದಿಲ್ಲ. ನಾನು ನನ್ನ ಗಂಡನ ಮನೆಯವರ ವಂಶವೃಕ್ಷವನ್ನು ಹಾಜರುಪಡಿಸಿದರೆ ಚಾಸಾ-1 ರವರು ನನ್ನ ಅತ್ತಿಗೆ ಎಂಬ ವಿಚಾರ ತಿಳಿದು ಬರುತ್ತದೆ ಎಂಬ ಕಾರಣಕ್ಕಾಗಿ ಸದರಿ ದಾಖಲೆಯನ್ನು ನಾನು ಹಾಜರುಪಡಿಸುವುದಿಲ್ಲ ಎಂದು ಹೇಳುತ್ತಿದ್ದೇನೆಂದರೆ ಸಾಕ್ಷಿಯು ನನ್ನ ಮನೆಯವರನ್ನು ಈ ಪ್ರಕರಣದಲ್ಲಿ ಕರೆತರಲು ನಾನು ಇಚ್ಚಿಸುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಗಂಡ ಆಟೋ ಓಡಿಸುತ್ತಾರೆ. 4 ವರ್ಷಗಳ ಹಿಂದೆ ನನ್ನ ಗಂಡನಿಗೆ ರಸ್ತೆ ಅಪಘಾತವಾಗಿತ್ತು.

ಘಟನಾ ಸ್ಥಳದಿಂದ ಚಾಸಾ-1 ರವರನ್ನು ಆಸ್ಪತ್ರೆಗೆ ಅವರ ಗಂಡನ ದ್ವಿಚಕ್ರ ವಾಹನದಲ್ಲಿ ಇಬ್ಬರೇ ಹೋದರು. ನಾನು ಘಟನಾ ದಿನದಂದು ದೇವಸ್ಥಾನಕ್ಕೆ ಹೋಗಿರುವುದಿಲ್ಲ ಮತ್ತು ಚಾಸಾ-1 ಮತ್ತು ಅವರ ತಮ್ಮ ಮಾಲತೇಶ್ ಹೇಳಿಕೊಟ್ಟಂತೆ ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಆರೋಪಿತರ ಜಮೀನಿನನ್ನು ಕಬಳಿಸುವ ಉದ್ದೇಶದಿಂದ ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಃಃ ಮರು ವಿಚಾರಣೆ ಇಲ್ಲಃಃ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಓ

**Sd/-**
ಪ್ರ.ದ.ನ್ಯಾದಂಃ ನ.ರಾ.ಪುರ.

ಸಾಕ್ಷಿ ಸಹಿಃ